**ಮೆ: ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಧೋಳ**

C.C.No.1137/2019
CW7/PW6

| | |
|---|---|
| ಹೆಸರು | ಭೀಮಶಿ ಕೊಳೂರ |
| ತಂ ದೆ ಹೆಸರು | ನಾಗಪ್ಪ |
| ವಯಸ್ಸು | 26 ವರ್ಷ |
| ಉದ್ಯೋಗ | ಗೌಂಡಿ ಕೆಲಸ |
| ವಾಸಸ್ಥಳ | ಉತ್ತೂರ ಗ್ರಾಮ ತಾ: ಮುದೋಳ |

**ದಿನಾಂಕ: 22-04-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ :- ಎ.ಪಿ.ಪಿ ರವರಿಂದ.**

ಚಾಸಾ-1 ನನ್ನ ಅಕ್ಕ. ಆರೋಪಿ ನಂ.5 ಚಾಸಾ-1 ರವರ ಗಂಡ. ಉಳಿದ ಆರೋಪಿತರ ಪರಿಚಯ ನನಗೆ ಇರುತ್ತದೆ. ಚಾಸಾ-4 ನನ್ನ ತಂದೆ ಮತ್ತು ಚಾಸಾ-6 ನನ್ನ ಅಕ್ಕ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**ಪಾಟೀ ಸವಾಲು :- ಎ.ಪಿ.ಪಿ ರವರಿಂದ.**

ದಿನಾಂಕ 12.09.2018 ರಂದು ರಾತ್ರಿ 10-45 ಗಂಟೆ ಸುಮಾರಿಗೆ ಚಾಸಾ-1 ರವರು ನಮ್ಮ ತಂದೆಗೆ ಪೋನ ಮಾಡಿ ಆರೋಪಿತರು ಅವರಿಗೆ ಹೋಡಿ ಬಡಿ ಮಾಡಿರುತ್ತಾರೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ನಾನು, ಚಾಸಾ-4 ಮತ್ತು 6 ಕೂಡಿಕೊಂಡು ಕುಳಲಿ ಗ್ರಾಮಕ್ಕೆ ಹೋಗಿ ಚಾಸಾ-1 ರವರಿಗೆ ಘಟನೆಯ ಬಗ್ಗೆ ವಿಚಾರಿಸಿದಾಗ ಚಾಸಾ-1 ರವರು ದಿನಾಂಕ 29.09.2018 ರಂದು ರಾತ್ರಿ 10-30 ಗಂಟೆ ಸುಮಾರಿಗೆ ತಾನು ಮಲಗಿಕೊಂಡಾಗ ಆರೋಪಿ ನಂ.1 ಇವರು ನನಗೆ ಪೋನ ಮಾಡಿ ನಿನ್ನ ಗಂಡನ ಕೈಗೆ ಕೊಡು ಅಂತಾ ಅಂದಾಗ ನಾನು ನನ್ನ ಗಂಡ ಮಲಗಿದ್ದಾರೆ ಬೆಳಿಗ್ಗೆ ಮಾತನಾಡು ಅಂತಾ ಹೇಳಿದಾಗ ಆರೋಪಿ ನಂ.1 ರಿಂದ 4 ರವರು ಅಕ್ರಮಕೂಟ ಕಟ್ಟಿಕೊಂಡು ಬಂದು ನಮ್ಮ ಮನೆಯಲ್ಲಿ ಅತೀ ಕ್ರಮಣ ಪ್ರವೇಶ ಮಾಡಿ ಆರೋಪಿ ನಂ.5 ರವರ ಚೆತಾವಣೆಯಿಂದ ನನಗೆ ಕೈಯಿಂದ ಹೋಡಿ ಬಡಿ ಮಾಡಿ ಮನೆಯಿಂದ ಹೋರಗೆ ಎಳೆದುಕೊಂಡು ಬಂದರು ಮತ್ತು ಆರೋಪಿ ನಂ.2 ರಿಂದ 4 ರವರು ಚಾಸಾ-4 ರವರ ಮೈ ಮೇಲೆ ಇದ್ದ ಸೀರೆ ಮತ್ತು ಜಂಪರನ್ನು ಜಗ್ಗಾಡಿ ಅವಳ ಮಾನಭಂಗ ಮಾಡಲು ಪ್ರಯತ್ನಪಟ್ಟರು ಹಾಗೂ ಆಗ ಸದರಿ ಜಗಳವನ್ನು ಚಾಸಾ-8 ರವರು ಬಿಡಿಸಿಕೊಂಡರು ಎಂದು ತಿಳಿಸಿದಳು ಎಂದರೆ ಸರಿಯಲ್ಲ.

ಈ ಪ್ರಕರಣದ ವಿಚಾರಣೆ ಕಾಲಕ್ಕೆ ದಿನಾಂಕ 21.09.2018 ರಂದು ಈಗ ನನಗೆ ಓದಿ ಹೇಳಿದ ಹಾಗೇ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ಈಗ ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.05.15 10:49:00 +0530